# ಪ್ರಧಾನ ಜಿಲ್ಲಾ, ಸತ್ರ ಮತ್ತು ವಿಶೇಷ ನ್ಯಾಯಾಲಯ

# ಬಳ್ಳಾರಿ

## ವಿಶೇಷ ಮೊಕದ್ದಮೆ ಸಂಖ್ಯೆಃ 133/2016

**ಪಿ.ಡಬ್ಲ್ಯೂಃ 2 (ಸಿಡಬ್ಲ್ಯೂಃ 3)**

| | | |
|---|---|---|
| **ಸಾಕ್ಷಿದಾರರ ಹೆಸರು** | : | **ಶ್ರೀ ದೇವಿದಾಸ್** |
| **ತಂದೆಯ ಹೆಸರು** | : | **ಲೇಟ್ ಕೆ. ವಸಂತರಾವ್** |
| **ವಯಸ್ಸು** | : | **51 ವರ್ಷ** |
| **ಕೆಲಸ** | : | **ಹಿರಿಯ ಪಶು ವೈದ್ಯಕೀಯ ಪರಿವೀಕ್ಷಕರು,<br>ಉಪ-ನಿರ್ದೇಶಕರವರ ಕಛೇರಿ<br>ಬಳ್ಳಾರಿ** |
| **ವಾಸ ಸ್ಥಳ** | : | **ಬಳ್ಳಾರಿ.** |

**ಸಾಕ್ಷಿಯನ್ನು ದಿನಾಂಕ 11-09-2023 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

ನಾನು ಬಳ್ಳಾರಿ ಉಪ-ನಿರ್ದೇಶಕ ಕಛೇರಿಯಲ್ಲಿ ಪಶು ವೈದ್ಯಕೀಯ ಪರಿವೀಕ್ಷಕನಾಗಿ 2011 ರಿಂದ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

**2.** ಈ ಪ್ರಕರಣದಲ್ಲಿ ದಿನಾಂಕ 12-01-2015 ರಂದು ಲೋಕಾಯುಕ್ತ ಇನ್ಸ್ ಪೆಕ್ಟರ್ ರವರು ನಮ್ಮ ಉಪ-ನಿರ್ದೇಶಕರಿಗೆ ಇಬ್ಬರು ಪಂಚರನ್ನು ಕಳಿಸುವಂತೆ ಮನವಿ ಮಾಡಿಕೊಂಡಿದ್ದರ ಮೇರೆಗೆ ನಾನು ನನ್ನ ಮೇಲಾಧಿಕಾರಿಯಾಗಿದ್ದ ಉಪ-ನಿರ್ದೇಶಕರವರ

**Spl.C.No.133/2016**
**P.W.2 (C.W.3)**
**Date : 11.09.2023**

ಆದೇಶದ ಮೇರೆಗೆ ಬೆಳಗ್ಗೆ 10-30 ಗಂಟೆಗೆ ನಮ್ಮ ಕಛೇರಿಯನ್ನು ಬಿಟ್ಟು ಲೋಕಾಯುಕ್ತ ಕಛೇರಿಗೆ ಬೆಳಗ್ಗೆ 11-30 ಗಂಟೆಗೆ ಹೋಗಿರುತ್ತೇನೆ. ಅಲ್ಲಿ ಇನ್ಸ್‌ಪೆಕ್ಟರ್ ಜಿ.ಎಸ್. ಹೆಬ್ಬಾಳ್ ರವರು ಮತ್ತು ಚಾಸಾಃ 2 ಜಿ.ಆರ್. ಯರಕುಲ ಸ್ವಾಮಿ ಅಲ್ಲದೇ ಫಿರ್ಯಾದುದಾರರು ಇದ್ದರು. ಇನ್ಸ್‌ಪೆಕ್ಟರ್ ರವರು ನಮಗೆ ಫಿರ್ಯಾದುದಾರರನ್ನು ಪರಿಚಯ ಮಾಡಿಕೊಟ್ಟು ಅವರು ಮನೆ ಖಾತಾ ಬದಲಾವಣೆಗಾಗಿ ಅರ್ಜಿಯನ್ನು ಗ್ರಾಮಪಂಚಾಯಿತಿಯ ಕಾರ್ಯದರ್ಶಿಯಾಗಿದ್ದ 1 ನೇ ಆರೋಪಿಯನ್ನು ಕೇಳಿದಾಗ ಅವರು ರೂ.2,500/- ಗಳನ್ನು ಲಂಚವಾಗಿ ಕೇಳಿದ್ದರಿಂದ ದೂರನ್ನು ಸಲ್ಲಿಸಿರುತ್ತಾರೆ ಎಂದು ತಿಳಿಸಿದರು. ನನ್ನ ಸಮಕ್ಷಮ ಫಿರ್ಯಾದುದಾರರು ಇನ್ಸ್‌ಪೆಕ್ಟರ್ ರವರ ಮುಂದೆ ಏನು ಹಾಜರು ಪಡಿಸಿದ್ದರು ಎಂದು ಬಹಳ ದಿನಗಳಾಗಿದ್ದರಿಂದ ಈಗ ಹೇಳಲು ಜ್ಞಾಪಕ ಇರುವುದಿಲ್ಲ.

**(ಈ ಹಂತದಲ್ಲಿ ವಿಶೇಷ ಸರ್ಕಾರಿ ಅಭಿಯೋಜಕರು ಸಮಯ ಕೋರಿದ್ದರಿಂದ ಮುಂದೂಡಲಾಯಿತು)**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)**

**ಓ.ಹೇ.ಕೆ. ಸರಿ ಇದೆ.**

\

**ಪ್ರಧಾನ ಜಿಲ್ಲಾ, ಸತ್ರ ಮತ್ತು ವಿಶೇಷ ನ್ಯಾಯಾಧೀಶರು,**
**ಬಳ್ಳಾರಿ.**